ರೂ. 249.5.00 ಲಕ್ಷಗಳಿಗೆ ಕಾರ್ಯಾದೇಶವನ್ನು ದಿನಾಂಕ: 30–5–2012ರಲ್ಲಿ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶವು (ಮಳೆಗಾಲವು ಸೇರಿದಂತೆ) ನೀಡಲಾಗಿರುತ್ತದೆ. ಈ ಕಾಮಗಾರಿಯು ಪ್ರಾರಂಭಗೊಂಡು, ವಾರ್ಡ್ ಬ್ಲಾಕ್ ಕಟ್ಟಡವು ಪಾಯದ ಹಂತದಲ್ಲಿದೆ ಹಾಗೂ ಒ.ಪಿ.ಡಿ ಬ್ಲಾಕ್‌ನ ಇಟ್ಟಿಗೆ ಕಟ್ಟಡವು ಲಿಂಟಲ್ ಮಟ್ಟದಲ್ಲಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಶೈಕ್ಷಣಿಕ ಸುಧಾರಣೆ ಕ್ರಮ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 8 : (44)

ಶ್ರೀ ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ ಜಿಲ್ಲೆಯು ರಾಜ್ಯದ ಶೈಕ್ಷಣಿಕ ಸೂಚ್ಯಂಕದಲ್ಲಿ ಅತ್ಯಂತ ಕೆಳಸರದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ)ಬಂದಿದ್ದಲ್ಲಿ ಜಿಲ್ಲೆಯನ್ನು ಶಿಕ್ಷಣದ ಕ್ಷೇತ್ರದಲ್ಲಿ ಸುಧಾರಣೆಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

ಇ) ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳಿಗೆ ಸೂಕ್ತ ಶಿಕ್ಷಣ ದೊರೆಯದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಕೊರೆತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಜಿಲ್ಲೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಗೊಳಿಸಲು ಸರ್ವ ಶಿಕ್ಷಣ ಅಭಿಯಾನದಡಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

- ಜಿಲ್ಲೆಯ ಎಲ್ಲಾ ಶಿಕ್ಷಕರಿಗೆ ಡಿ.ಎಸ್.ಇ.ಆರ್.ಟಿ. ಮುಖಾಂತರ ತರಬೇತಿಯನ್ನು ನೀಡಲಾಗಿದೆ.
- ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್ ಎಂದು ಗುರ್ತಿಸಿ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ತಲಾ ಒಂದರಂತೆ 3 ತಾಲ್ಲೂಕುಗಳಲ್ಲಿ 3 ಕಸ್ತೂರಬಾ ಗಾಂಧಿ ವಸತಿ ವಿದ್ಯಾಲಯವನ್ನು ತೆರೆದಿದ್ದು, ಒಟ್ಟು 406 ಹೆಣ್ಣು ಮಕ್ಕಳು ದಾಖಲಾಗಿರುತ್ತಾರೆ.
- 88 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದು ಶಾಲೆಗೆ 5 ಕಂಪ್ಯೂಟರ್ ಹಾಗೂ ಒಂದು ಯು.ಪಿ.ಎಸ್. ಒದಗಿಸಲಾಗಿದೆ.
- ಸರ್ವ ಶಿಕ್ಷಣ ಅಭಿಯಾನ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ (2011–12) ಕೆಳಕಂಡ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
  - 169 ಹೊಸ ಪ್ರಾಥಮಿಕ ಶಾಲೆಗಳು.
  - 1733 ಹೆಚ್ಚುವರಿ ಕೊಠಡಿಗಳು
  - 271 ಮುಖ್ಯೋಪಾಧ್ಯಾಯರ ಕೊಠಡಿಗಳು.
  - ಹಿರಿಯ ಪ್ರಾಥಮಿಕ ಶಾಲೆಗಳಿಗೆ 84 ಕೊಠಡಿಗಳು
  - 496 ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ
  - 455 ಶಾಲೆಗಳಿಗೆ ಶೌಚಾಲಯ ಸೌಲಭ್ಯ
  - 1198 ಶಾಲೆಗಳಿಗೆ ವಿದ್ಯುತ್ ಸೌಲಭ್ಯ
  - 42 ಶಾಲೆಗಳಿಗೆ ಕಾಂಪೌಂಡ್ ಗೋಡೆ
  - 759 ಶಾಲೆಗಳಿಗೆ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯ
  - 32 ಶಾಲೆಗಳಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಶೌಚಾಲಯ
  - ಮಕ್ಕಳು ಕುಳಿತುಕೊಳ್ಳಲು 87575 ಆಸನಗಳು
  - 78 ಶಾಲೆಗಳಿಗೆ ಮುಖ್ಯ ದುರಸ್ತಿ
  - 935 ಶಾಲೆಗಳಿಗೆ ಅಗ್ನಿಶಾಮಕ ಸಲಕರಣೆ

2012–13ನೇ ಸಾಲಿನಲ್ಲಿ 354 ಹೆಚ್ಚುವರಿ ಕೊಠಡಿಗಳು, 442 ಶೌಚಾಲಯಗಳು, 355 ಹೆಣ್ಣು ಮಕ್ಕಳ ಶೌಚಾಲಯ, 152 ಶಾಲೆಗಳಿಗೆ

ಕುಡಿಯುವ ನೀರಿನ ಸೌಲಭ್ಯ ಹಾಗೂ 3378 ಶಾಲೆಗಳಿಗೆ ಕಾಂಪೌಂಡ್ ಗೋಡೆ ಒದಗಿಸಲಾಗುವುದು.

- 2808 ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರ್ತಿಸಿದ್ದುಅವರಿಗೆ ಅಗತ್ಯವಿರುವ ಮೆಡಿಕಲ್ ಕ್ಯಾಂಪ್ ಸಾಧನ ಹಾಗೂ ಸಲಕರಣೆಗಳನ್ನು ನೀಡಲಾಗಿದೆ. ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.
- 1158 ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಿವಿಧ ಶಾಲೆಯಿಂದ ಹೊರಗುಳಿದ ಮಕ್ಕಳ ಚಟುವಟಿಕೆಗಳಲ್ಲಿ ತೊಡಗಿಸಲಾಗಿದೆ.

ಇನ್ನುಳಿದಂತೆ ಸರ್ವ ಶಿಕ್ಷಣ ಅಭಿಯಾನದ ಎಲ್ಲಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಇ) ಸರ್ವ ಶಿಕ್ಷಣ ಅಭಿಯಾನ ಅಡಿಯಲ್ಲಿ 2009–10ನೇ ಸಾಲಿನವರೆಗೆ ಒಟ್ಟು 1142 ಪ್ರಾಥಮಿಕ ಶಿಕ್ಷಕರನ್ನು ನೇಮಿಸಲಾಗಿರುತ್ತದೆ. 2010–11ನೇ ಸಾಲಿನಿಂದ 2012–13ನೇ ಸಾಲಿನವರೆಗೆ ಸರ್ವ ಶಿಕ್ಷಣ ಅಭಿಯಾನ ದಿಂದ ಮಂಜೂರಾಗಿರುವ ಒಟ್ಟು 347 ಪ್ರಾಥಮಿಕ ಶಿಕ್ಷಕರ ಹುದ್ದೆಗಳ ನೇಮಕಾತಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) 2011–12ನೇ ಸಾಲಿನ ಡೈಸ್ ಅಂಕಿ ಅಂಶಗಳ ಪ್ರಕಾರ ಯಾದಗಿರಿ ಜಿಲ್ಲೆಯಲ್ಲಿ ಆರ್.ಟಿ.ಇ ನಿಯಮಗಳನ್ವಯ ಪ್ರಾಥಮಿಕ ಶಾಲಾ ಹಂತದಲ್ಲಿ ವಿದ್ಯಾರ್ಥಿ ಶಿಕ್ಷಕರ ಅನುಪಾತವು 30.08 : 1 ಆಗಿರುತ್ತದೆ.

ಇಲಾಖಾ ವತಿಯಿಂದ ಖಾಯಂ ಹುದ್ದೆಗಳನ್ನು ಭರ್ತಿ ಮಾಡುವವರೆಗೂ ಜಿಲ್ಲಾ ಹಂತದಲ್ಲಿ ಅಗತ್ಯವಿರುವ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸಲಾಗಿರುತ್ತದೆ ಮತ್ತು ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅಗತ್ಯವಿರುವ ಶಾಲೆಗಳಲ್ಲಿ ಕೆಲಸ ನಿರ್ವಹಿಸಲು ಶಿಕ್ಷಕರ ರಿಡಿಪ್ಲಾಯ್‌ಮೆಂಟ್ ಮಾಡಲಾಗಿದೆ.